ಮನಸೋತು, ವಿವಿಧ ಕೋನಗಳಲ್ಲಿ ಇಣುಕಿಣುಕಿ ಕನ್ನಡಿ ನೋಡಿಕೊಳ್ಳುತ್ತಿದ್ದರು. ಮೂತ್ರಿಸುವಾಗ ರೂಢಿಯಂತೆ ಗಂಡಸರ ಶೌಚಾಲಯಕ್ಕೆ ಹೋಗಿ ನಿಲ್ಲುತ್ತಿದ್ದರೂ, ಕ್ಷಣದಲ್ಲಿ ತಮ್ಮ ಅಂಗವೊಂದು ಇರದ ಅನುಭವವಾಗಿ ಕೂಡಲೇ ಜಾಗ್ರತಗೊಂಡು ಹಿಂದಿರುಗುತ್ತಿದ್ದರು. ಆದರೆ ನಿಜಕ್ಕೂ ಅವರಿಗೆ ಕಸಿವಿಸಿಯಾಗಿದ್ದು ತಿಂಗಳಿಗೊಂದರಂತೆ ಬರುವ ಪೀರಿಯಡ್‌ನಲ್ಲಿ. ನ್ಯಾಪ್‌ಕಿನ್ ಬಳಸಿ ನಿಯಂತ್ರಿಸುವುದನ್ನು ಕಲಿತರೂ ಮೊದಮೊದಲು ಯಾಕೋ ಅಸಹ್ಯವೆನ್ನಿಸುತ್ತಿತ್ತು. ಕ್ರಮೇಣ 'ಹ್ಯಾಪಿ ಟು ಬ್ಲೀಡ್'ನಿಂದ 'ಪ್ರೌಡ್ ಟು ಬ್ಲೀಡ್' ಎಂಬ ಮನಸ್ಥಿತಿಯನ್ನು ರೂಢಿಸಿಕೊಂಡರು.

ಆಡುವ ವಯಸ್ಸಿನ ಹುಡುಗಿ ಇಷ್ಟೊಂದು ದೊಡ್ಡ ಹುದ್ದೆಯಲ್ಲಿರುವುದನ್ನು, ಆಕೆಯನ್ನು ಕಂಡರೆ ಎಲ್ಲರೂ ಕೊಡುತ್ತಿದ್ದ ಗೌರವವನ್ನು ಕಂಡು ಆಕೆಯ ಪೂರ್ವಾಶ್ರಮದ ತಂದೆತಾಯಿಯರು ಆನಂದತುಂದಿಲರಾದರು. ಒಮ್ಮೆ ಅಪ್ಪಿಕೊಂಡು ಮುದ್ದಾಡುವ ಅಭೀಪ್ಸೆ ಬಂದರೂ ಅದನ್ನು ಹಾಗೇ ಅದುಮಿಟ್ಟುಕೊಂಡರು. ತಮ್ಮ ಮಗಳಿಗೆ ಪುನರ್ಜನ್ಮ ನೀಡಿದಿರಿ ಡಾಕ್ಟರೇ ಎಂದು ಕಾಲಿಗೆ ಬೀಳುವಾಗ ಯಾಕೋ ತಮ್ಮ ಮಗಳ ಕಾಲಿಗೇ ಬೀಳುತ್ತಿದ್ದೇವಲ್ಲ ಎಂಬಂತೆ ಮುಜುಗರವೆನಿಸಿತು.

***

ಅದೇ ವೇಳೆ ವಿದೇಶದ ವಿಶ್ವವಿದ್ಯಾಲಯದಿಂದ ಟ್ರಾನ್ಸ್‌ಜಂಡರ್ ಮನಸ್ಥಿತಿಯ ಬಗೆಗೆ ಪ್ರಬಂಧ ಮಂಡಿಸಲು ಕರೆಬಂತು. ಲೇಖನವನ್ನು ಬರೆದು ಮುಗಿಸಿ, ಅವರಿಗೆ ಕನ್‌ಫರ್ಮೇಶನ್ ಕೊಟ್ಟು ವೀಸಾಗೆ ಅರ್ಜಿ ಸಲ್ಲಿಸುವಾಗ ತನ್ನ ಪಾಸ್‌ಪೋರ್ಟ್‌ನಲ್ಲಿನ ಫೋಟೋಗೂ, ತನ್ನ ಮುಖಚಹರೆಗೂ ತಾಳೆಯಾಗದೇ ನಿರಾಕರಿಸಲಾಯಿತು. ತಾನೇ ಡಾ. ಚಿರಂಜೀವಿ, ಹೀಗ್ನೀಗೆ ಬದಲಾಗಿದ್ದೇನೆ ಎಂದರೆ ಸಹಿ ಮಾಡಿ ಎಂದು ಬಿಳಿಹಾಳೆ, ಪೆನ್ನನ್ನು ಮುಂದಕ್ಕೆ ಹಿಡಿದರು. ಅದುವರೆಗೂ ಬರೀ ಕಂಪ್ಯೂಟರಿನಲ್ಲಿ ಕೀ ಮಾಡುತ್ತಿದ್ದುದರಿಂದ ಬರವಣಿಗೆಯ ಬಗ್ಗೆ ಯೋಚಿಸಿಯೇ ಇರಲಿಲ್ಲ. ಆದರೆ ಇವೆಲ್ಲ ತಾನೇ ಬರೆದ ಪುಸ್ತಕಗಳು, ನೋಡಿ ಎಂದು ತೋರಲು ಹೋದರೆ, ಅಲ್ಲಿರುವ ಫೋಟೋವನ್ನೇ ಮುಖಕ್ಕೆ ಹಿಡಿದು ತಲೆಗಿಲೆ ಕೆಟ್ಟದೆಯಾ ಎಂಬಂತೆ ಗುರಾಯಿಸಿದರು. ಇನ್ಯಾವುದೋ ಒಂದಕ್ಕೆ ಆಧಾರ್ ಲಿಂಕ್ ಕೊಡಲು ಹೋದರೆ ಫಿಂಗರ್‌ಪ್ರಿಂಟ್ ಮತ್ತು ಕಣ್ಣರೆಟೆಗಳು ಹೊಂದದೇ ಮುಖಭಂಗವಾಯಿತು. ಅಯ್ಯೋ, ಈ ಹುಚ್ಚರನ್ನೆಲ್ಲ ಹೇಗೆ ಕನ್ವಿನ್ಸ್ ಮಾಡುವುದು ಎಂದು ಪರಿತಪಿಸಿದರು. ತಾನು ಡಾಕ್ಟರರಾದರೂ ಆಕೆ ಏನು ಓದಿದ್ದಾಳೆ ಎಂಬುದು ಗೊತ್ತಿಲ್ಲ. ಹಾಗಾಗಿ ಎಸ್ಸೆಸ್ಸೆಲ್ಸಿ, ಪಿಯುಸಿಯಿಂದ ಹಿಡಿದು, ಎಂಬಿಬಿಎಸ್–ಎಂಡಿವರೆಗೆ ಎಲ್ಲವನ್ನೂ ಆಕೆಯ ಹೆಸರಲ್ಲಿ ಮೊದಲಿನಿಂದಲೇ ಮಾಡಬೇಕೆಂಬುದು ದೊಡ್ಡ ರೇಜಿಗೆ ಅನ್ನಿಸಿತು.

ಅದೇ ವೇಳೆಗೆ ಅವರನ್ನು ಗೌರವ ಡೈರೆಕ್ಟರ್ ಹುದ್ದೆಯಲ್ಲಿ ನೋಡಲು ಮನಸ್ಸಿಲ್ಲದ ಅನೇಕರು ಪ್ರಾಪಂಚಿಕ ವಿಷಯಗಳನ್ನಿರಿಸಿ ಸರ್ಕಾರಕ್ಕೆ ಮೂಕರ್ಜಿ ಬರೆದರು. ಯಾವ ನಿಯಮಾವಳಿಯನ್ವಯ ಇದು ತಪ್ಪು ಎಂದು ನಿರ್ಧರಿಸಲಾಗದ ಸರ್ಕಾರ, ತನ್ನ ನೌಕರನೊಬ್ಬ ಪೂರ್ವಭಾವಿ ಅನುಮತಿಯಿಲ್ಲದೆ ಹೀಗೆಲ್ಲ ದೇಹಾಂತರ ಮಾಡುವುದು ಅಸಹಜ ಎಂದು ಪ್ರತಿಪಾದಿಸಿ ನೋಟೀಸ್ ನೀಡಿತು. ಲಿಂಗಾಂತರಕ್ಕೆ ಅನೇಕ ದೇಶಗಳು ಸಮ್ಮತಿ ನೀಡಿದ್ದರೂ ಅಲ್ಲಿ ದೇಹದ, ಜ್ಞಾನದ ವರ್ಗಾವಣೆ ಆಗದ ಕಾರಣ ಈ ಪ್ರಕರಣವನ್ನು ಹೇಗೆ ಬಗೆಹರಿಸಬೇಕು ಎಂಬುದೇ ತಿಳಿಯದೆ ಮುಗುಂ ಆಗಿಯೇ ಇದ್ದುಬಿಟ್ಟಿತು.

***

ಯಥಾರೀತಿ ಗಂಡನಂತೆ ಡಾ.ಮೈಥಿಲಿಯ ಪಕ್ಕದಲ್ಲಿ ಮಲಗುತ್ತಿದ್ದರೂ ತನ್ನ ವಯಸ್ಸಿನ ಕಾರಣಕ್ಕೆ ಪ್ರಚೋದಿತವಾಗುತ್ತಿದ್ದ ಮಾಂಸಖಂಡಗಳು ಮನಸ್ಸನ್ನು ಮೀರಿ ವರ್ತಿಸಲಾರಂಭಿಸಿದವು. ಗಂಡಸಿನ ಮನಸ್ಥಿತಿಯ ಡಾ.ಚಿರಂಜೀವಿಗೆ ಹೆಂಡತಿಯ ಜೊತೆಗಿನ ಸಂಯೋಗವನ್ನು ಮನಸ್ಸು ಬಯಸುತ್ತಿದ್ದರೂ, ಆಕೆ ಅನೇಕ ಕಾರಣಗಳಿಂದಾಗಿ ನಿರಾಕರಿಸಿ, ಪ್ರತ್ಯೇಕವಾಗಿ ಮಲಗಲು ಶುರುಮಾಡಿದಳು. ಹೆಣ್ಣಿನ ಶರೀರದ ವಾಂಛೆಗಳನ್ನು ಹೇಗೆ ತೀರಿಸುವುದು ಎಂಬುದನ್ನು ಬಗೆಹರಿಸಲು ಸಾಧ್ಯವಾಗದೇ ನರಳಿದರು. ಮನಸ್ಸು ಹೆಣ್ಣನ್ನು ಬಯಸುವುದು, ದೇಹ ಗಂಡನ್ನು ಬಯಸುವುದು ಎಂಬ ತುಮುಲದಲ್ಲಿ ನಲುಗಿದರು. ತಾನು ಗಂಡೋ ಹೆಣ್ಣೋ ಅಥವಾ ಎರಡೂ ಹೌದೋ, ಎರಡೂ ಅಲ್ಲವೋ, ಗೇ ನೋ, ಲೆಸ್ಬಿಯನ್ನೋ ಎಂಬ ವಿಚಿತ್ರ ಮನಸ್ಥಿತಿಯನ್ನು ಅನುಭವಿಸಿದರು.. ಎಂದಿನಂತೆ ಒಂದು ಸಂಜೆ ಪಾರ್ಕ್‌ನಲ್ಲಿ ವಾಕಿಂಗ್ ಮಾಡುವಾಗ ಇಪ್ಪತ್ನಾಲ್ಕರ ತರುಣ ಡಾ. ಚಿರಂಜೀವಿಯನ್ನೇ ಅನುಸರಿಸುತ್ತಿದ್ದ. ತನ್ನ ಪ್ರವರಗಳನ್ನೆಲ್ಲ ಬಹುಶಃ ಕೇಳಿರಬಹುದಾದ



ಆತ ಮೆಡಿಕಲ್ ಸ್ಟೂಡೆಂಟ್ ಇರಬೇಕು, ತನ್ನಿಂದ ಏನೋ ಸಂಶಯ ಬಗೆಹರಿಸಿಕೊಳ್ಳಲು ಬರುತ್ತಿರಬೇಕು ಎಂದೇ ಭಾವಿಸಿದರು. ಸುಂದರ ಯುವಕ. ತಾನು ಈತನ ದೇಹದೊಳಕ್ಕೆ ಸೇರಿಕೊಂಡಿದ್ದಿದ್ದರೆ ಹೇಗಿರುತ್ತಿತ್ತು ಎಂದು ಒಂದು ಕ್ಷಣ ಕಲ್ಪಿಸಿಕೊಂಡರು. ಆತ ಪಕ್ಕದಲ್ಲಿ ಬಂದು ಕೈಮುಟ್ಟಲು ಪ್ರಯತ್ನಿಸಿದರೆ, ಇವರೇ ಹಾಯ್ ಎಂದು ಕೈಮುಂದೆ ಮಾಡಿದರು. ಸದುವು ಸಿಕ್ಕ ಆತ ಹೆಗಲ ಮೇಲೆ ಕೈಹಾಕಿದ. ನಂತರ ಸೊಂಟ ಬಳಸಲು ನೋಡಿದ. ಆಗ ಅವರಿಗೆ ಅರಿವಾಯಿತು, ತಾನು ಹೆಣ್ಣೆಂದು ಹೀಗೆಲ್ಲ ಮಾಡುತ್ತಿರುವನೆಂದು. ತಾನು ಹೆಣ್ಣಲ್ಲ ಗಂಡು ಎಂದು ಹೇಗೆ ಅವನಿಗೆ ಮನವರಿಕೆ ಮಾಡಿಕೊಡುವುದು ಎಂಬುದೇ ತಿಳಿಯದೆ ಮೂಕರಾದರು.

'ಯಾಕೆ ಬುಲ್‌ಬುಲ್ ಮಾತಾಡಕಿಲ್ವ' ಎಂದು ಸಿನಿಮಾ ಶೈಲಿಯಲ್ಲಿ ಚುಡಾಯಿಸಿದವನು, ಆಲಂಗಿಸಿ ತುಟಿಗೆ ತುಟಿ ಬೆರೆಸಿದ. ನಿರ್ಜನವಾದ ಪ್ರದೇಶ ಬೇರೆ. ಯಾವುದೋ ಗಿಡದ ಮರೆಗೆ ಎಳೆದುಕೊಂಡು ಹೋದವನು ಮೈಮೇಲೆ ಬಿದ್ದು ಆಕ್ರಮಣ ಮಾಡಿಯೇಬಿಟ್ಟ! ಆಕ್ರಮಣ ಎಂದರೆ ಅತ್ಯಾಚಾರವೇ! ಅದನ್ನು ಪ್ರತಿಭಟಿಸಬೇಕೋ, ಸ್ವೀಕರಿಸಬೇಕೋ ಎಂಬ ಗೊಂದಲದಲ್ಲಿ, ಅದೊಂದು ಪ್ರಯೋಗ ಎಂಬಂತೆ ಪರಿಗಣಿಸಿದರು. ಮನಸ್ಸಿಗೆ ಕಷ್ಟವೆನಿಸಿದರೂ, ದೇಹಕ್ಕೆ ಏನೋ ಒಂಥರ ಹಿತವೆನಿಸಿತು. ತನ್ನ ಮನಸ್ಸು ತನ್ನ ದೇಹದ ಮೇಲೆ ನಿಯಂತ್ರಣ ಸಾಧಿಸಲು ವಿಫಲವಾಗುತ್ತಿರುವ ಲಕ್ಷಣ ಕಾಣಿಸಿದರೂ, ದೇಹವೂ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸುತ್ತಿರುವುದನ್ನು ಗುರುತಿಸಿದರು. ಒಟ್ಟಾರೆ ಎರಡೂ ಬಯಾಲಜಿಕಲಿ ಸಿಂಕ್ ಆಗಲು ಪ್ರಯತ್ನಿಸುತ್ತಿವೆ ಎಂಬುದನ್ನು ದೃಢಪಡಿಸಿಕೊಂಡರು.

ಅತ್ಯಾಚಾರಕ್ಕೊಳಗಾದ ಚಿರಂಜೀವಿಯ ಮನಸ್ಸು ಅಷ್ಟಾಗಿ ಅಲ್ಲೋಲಕಲ್ಲೋಲವಾಗದಿದ್ದರೂ, ದೇಹ ಮಾತ್ರ ಏನೋ ಅಸಹ್ಯವಾದದ್ದು ತನ್ನೊಳಗೆ ಹರಿದಾಡುತ್ತಿರುವಂತೆ ಚಡಪಡಿಸಿತು. ಗಂಡಾದ ಆತನನ್ನು ತಡೆಯಲು ಹೆಣ್ಣಾಗಿ ತನಗಿರುವ ದೈಹಿಕ ಶಕ್ತಿ ಸಾಲದಾಯಿತಲ್ಲ ಎಂಬ ಕೀಳರಿಮೆ ಜಾಗೃತವಾಯಿತು. ಈವರೆಗೆ ತನ್ನದು ಗಂಡು ಮನಸ್ಸು ಎಂದುಕೊಂಡಿದ್ದರೂ, ಕ್ರಮೇಣ ಗಂಡಸರ ಬಗ್ಗೆಯೇ ಒಂದು ರೀತಿಯ ಅವರ್ಶನ್ ಶುರುವಾಯಿತು.

ಒಂದೆರಡು ತಿಂಗಳು ಅಲ್ಲಿ ಸೆಮಿನಾರ್, ಇಲ್ಲಿ ಲೆಕ್ಚರಿಂಗ್ ಎಂದು ತಿರುಗಾಡುವುದರಲ್ಲೇ ಕಾಲ ಕಳೆದುಹೋಗಿ ಸಿಮ್ಯಾನ್ಸ್‌ನ ಆಡಳಿತದ ಬಗ್ಗೆ ಹೆಚ್ಚು ಕಾಳಜಿವಹಿಸಲಾಗಲಿಲ್ಲ. ಬಾಡಿ ಟ್ರಾನ್ಸ್‌ಪ್ಲಾಂಟ್‌ನ ಬಗ್ಗೆ ಅರಿವಿದ್ದ ಹಿರಿಯ ಅಧಿಕಾರಿಗಳು, ತಮ್ಮ ಜೀವವನ್ನೇ ಮುಡಿಪಿಟ್ಟು ಪ್ರಯೋಗಕ್ಕೆ ಒಳಗಾದ ಅವರ ಬಗ್ಗೆ ಅಪಾರ ಗೌರವವಿಟ್ಟುಕೊಂಡಿದ್ದರು. ಆದರೆ ಅದರ ಅರಿವು ಕೆಲಹಂತದ ಸಿಬ್ಬಂದಿಗೆ ಇರಲಿಲ್ಲ. ಹೊಸ ಲೇಡಿ ಆಫೀಸರರ ಬಗ್ಗೆ ಅಷ್ಟಾಗಿ ಭಯಬೀಳಲಿಲ್ಲ. ಕೆಲವೇ ತಿಂಗಳಲ್ಲಿ ಸಿಮ್ಯಾನ್ಸ್‌ಲ್ಲಿ ಮತ್ತೆ ಅರಾಜಕತೆ ತಲೆದೋರಿತು. ನೂರಾರು ದೂರುಗಳು ಸರ್ಕಾರಕ್ಕೆ ತಲುಪಿ, ಇನ್ನೂ